ಮತ್ತೊಂದು ದಾಳಿಯೇ?

ತಮ್ಮ ಬಳಿ ಬಂದೂ ನಿಲ್ಲದೆ ಗೋವುಗಳೆಲ್ಲ 'ಅಂಬಾ' ಎಂದು ಆರ್ತನಾದ ಮಾಡುತ್ತ ಊರಿನತ್ತ 'ದಬ ದಬ' ಓಡುವುದನ್ನು ಕಂಡು ಹುಡುಗರೆಲ್ಲ ಗಾಬರಿಗೊಂಡರು.

ಮರದಿಂದ ಜಿಗಿದ ಕಿತ್ತಯನನ್ನು ಸುತ್ತುವರೆದ ಹುಡುಗರು 'ಕಿತ್ತಯ! ಗೋವುಗಳು ಯಾಕೆ ಇಂಗೆ ಓಡ್ತಾವೆ?' ಎಂದು ಕಳವಳದಿಂದ ಪ್ರಶ್ನಿಸಿದರು.

ಏದುಸಿರು ಬಿಡುತ್ತಿದ್ದ ಕಿತ್ತಯನ ಕಾಲುಗಳಲ್ಲಿ ಶಕ್ತಿ ಕುಂದಿದಂತೆ ಅನ್ನಿಸಿತು. ಅವನು ಸುಸ್ತಾಗಿ ಇದ್ದಲ್ಲೇ ಕುಸಿದು ಕುಳಿತನು. ಹುಡುಗರ ಪ್ರಶ್ನೆಗೆ ಉತ್ತರಿಸಲಾರದೆ ನಾಲಿಗೆ ಒಣಗಿತ್ತು. ಅವನು ಮಾಡಿದ ಕೈಸನ್ನೆಗಳನ್ನು ಅರ್ಥೈಸಿಕೊಳ್ಳಲಾರದೆ ಹುಡುಗರು ಮಿಕಮಿಕ ಕಣ್ಣು ಬಿಟ್ಟರು. ಕಡೆಗೊಮ್ಮೆ ಕಿತ್ತಯ ಕಷ್ಟಪಟ್ಟು ತನ್ನನ್ನು ಚೇತರಿಸಿಕೊಂಡನು.

'ಓಡಿ! ಓಡಿ! ಊರಮಂದಿಗೆ ಎಚ್ಚರ ಮಾಡಿ! ದಾಳಿ! ದಾಳಿ ಮಾಡಕ್ಕೆ ದಂಡು ಬಂದಾಂಗಿದೆ!'

'ಅಯ್ಯೋ ಅಂಗಾ? ಅಂಗಾರೆ ಬಾರ್ಲಾ ಎಲ್ರೂ ಓಡೋಗೋಣ!'

'ನೀವೆಲ್ಲ ಬಿರ್ರನೆ ಊರಿಗೆ ಓಡಿ, ಸುದ್ದಿ ತಿಳಿಸಿ! ತಡ ಮಾಡ್ಬ್ಯಾಡಿ!' ಕಿತ್ತಯ ಹುಡುಗರನ್ನು ತ್ವರಿತಪಡಿಸಿದನು.

'ಅಂಗಾರ ನೀನು?'

'ನಮ್ಮ ದಂಡು ಬರೋತನಕ ವೈರಿಗಳನ್ನ ತಡೆಗಟ್ಟಿ ನಾನಿಲ್ಲೇ ನಿಲ್ತೀ!' ಕಿತ್ತಯನ ಮಾತಿನಲ್ಲಿ ತೀರ್ಮಾನವಿತ್ತು.

'ಅಯ್ಯೋ! ಅದೆಂಗೋ ಸಾಧ್ಯ? ಮೊದ್ಲೇ ಕಾಲು ಸೋತು ಕುಂತಿದ್ದೀ!'

'ಸಾಧ್ಯ. ಎಲ್ಲ ಸಾಧ್ಯ. ಇದು ನನ್ನ ಮಾವ ಕೊಟ್ಟ ಅಸಲೀ ಬಿಲ್ಲು! ಸಾಲದ್ದಕ್ಕೆ ಈ ಕೋಲು, ಕುಡುಗೋಲು..' ಎನ್ನುತ್ತ ಬಿಲ್ಲನ್ನು ಹೆಗಲಿಗೆ ಏರಿಸಿಕೊಂಡು ದೃಢವಾಗಿ ಎದ್ದು ನಿಂತನು ಕಿತ್ತಯ.

'ನನ್ ತವ ಕೋಲು ಕುಡುಗೋಲು ಇವೆ! ನಾನೂ ಕಿತ್ತಯನ ಜೊತೆ ಇಲ್ಲೇ ನಿಲ್ತೀನಿ!' ಎಂದನು ಮಾರ.

'ಇಲ್ಲ ಇಲ್ಲ... ನಿನ್ನಪ್ಪನ ಮಾತು ಮೀರಬಾರ್ದು. ಈ ದಂಡಿನ್ ತಂಟೆ ಎಲ್ಲ ನಿನ್ಗೆ ಬ್ಯಾಡ. ನೀನೂ ಓಗೂ. ಉಸಾರಾಗ್ ಓಗೂ...'

ಬಲವಂತದಿಂದ ಎಲ್ಲರನ್ನೂ ಹೊರಡಿಸಿದ ಕಿತ್ತಯ.

ಬೆದರಿದ್ದ ಗೋವುಗಳು ಊರೊಳಗೆ ನುಗ್ಗಿದ ಕೂಡಲೇ ಊರ ಮಂದಿಯೆಲ್ಲ ಚುರುಕಾದರು. ಹುಡುಗರು ತಂದ ಸುದ್ದಿ ಕೇಳಿದಾಕ್ಷಣ ಗಂಗರ ದಂಡು ತರಾತುರಿಯಿಂದ ಹೊರಟು ಪೆರ್ಬ್ಬೊಳಲನ್ನು ಕುರಿತು ಧಾವಿಸಿತು.

ಇತ್ತ...

ಸೈನಿಕರ ಮೇಲೆ ಬಾಣದಮಳೆಗರೆದು ಕೆಲವರನ್ನು ಆಗಲೇ ಕೆಳಕ್ಕುರುಳಿಸಿದ್ದ ಕಿತ್ತಯ.

ಇದ್ದಕ್ಕಿದ್ದಂತೆ ಆ ನಿರ್ಮಾನುಷ್ಯವಾದ ಪ್ರದೇಶದಲ್ಲಿ ತಮ್ಮ ಮೇಲೆ ಬಾಣಗಳನ್ನು ಪ್ರಯೋಗಿಸಿದವರು ಯಾರು ಎಂದರಿಯದೆ ದಿಗ್ಭ್ರಾಂತರಾದರು ರಟ್ಟವಾಡಿಯ ಕಾಲಾಳುಗಳು. ಗೊಂದಲಗೊಂಡಿದ್ದ ಸೈನಿಕರ ಮುಂದೆ ಮರದ ಮೇಲಿಂದ 'ಹೊಯ್' ಎಂದು ಉದ್ಗರಿಸುತ್ತ ಧುಮುಕಿದ ಕಿತ್ತಯ. ತಮ್ಮ ಮುಂದೆ ಪ್ರತ್ಯಕ್ಷನಾದ ವೈರಿಯನ್ನು ಕಂಡ ಸೈನಿಕರು ಕೂಡಲೇ ಅವನ ಮೇಲೆರಗಲು ಅನುವಾದರು.

ಬಿಲ್ಲನ್ನು ಹೆಗಲಿಗೇರಿಸಿ ಕುಡುಗೋಲನ್ನು ಒಂದು ಕೈಯಲ್ಲಿ, ಬಿದಿರಿನ ದಂಡವನ್ನು ಮತ್ತೊಂದು ಕೈಯಲ್ಲಿ ಹಿಡಿದು ಗಿರಗಿರನೆ ತಿರುಗಿಸುತ್ತ ತನ್ನ ಸುತ್ತ ವ್ಯೂಹ ರಚಿಸಿಕೊಂಡವನ ಬಳಿ ಸುಳಿಯಲು ಯಾರಿಂದಲೂ ಸಾಧ್ಯವಾಗಲಿಲ್ಲ. ಮೀರಿ ಬಂದವರ ಹೊಟ್ಟೆಯಮೇಲೆ ಕಿತ್ತಯನ ಬಲಿಷ್ಠ ಕಾಲುಗಳು ಒಂದರನಂತರ ಒಂದು ಒನಕೆಯಂತೆ ಎರಗಿ ಕೆಳಕ್ಕುರುಳಿಸುತ್ತಿದ್ದಂತೆಯೇ, ಕೈಗಳಲ್ಲಿ ತಿರುಗುತ್ತಿದ್ದ ಆಯುಧಗಳು ಇನ್ನೂ ಕೆಲವರನ್ನು ಮಣ್ಣು ಮುಕ್ಕಿಸುತ್ತಿದ್ದವು. ಕಿತ್ತಯ ಅಡ್ಡಲಾಗಿ ಬಲವಾಗಿ ಜಾಡಿಸಿದ ದಂಡ ಒಮ್ಮೆಗೇ ಮೂರು ನಾಲ್ಕು ಮಂದಿಯನ್ನು ಒಟ್ಟಿಗೆ ಕೆಳಕ್ಕುರುಳಿಸಿತು.

'ಹೊ' ಎಂದು ಸಾಗರದಂತೆ ಭೋರ್ಗರೆಯುತ್ತ ಧಾವಿಸಿ ಬಂದ ಗಂಗರ ಸೈನ್ಯವು ರಟ್ಟವಾಡಿ ಸೈನ್ಯವನ್ನು ಆಕ್ರೋಶದಿಂದ ಎದುರಿಸಿದ್ದನ್ನು ನೋಡುತ್ತ ಕಿತ್ತಯ ಇನ್ನಷ್ಟು ಉತ್ಸುಕನಾಗಿ ಸೆಣಸಾಟವನ್ನು ಮುಂದುವರಿಸಿದನು.

ಆ ವೇಳೆಗೆ ಅಲ್ಲಿಗೆ ರವಾನೆಯಾದ ಕುದುರೆ ಸವಾರರಿಗೆ ಅಲ್ಲಿ ನಡೆಯುತ್ತಿದ್ದ ಪ್ರಚಂಡ ಕಾಳಗ ಕಂಡು ಆತಂಕವೂ ಆಶ್ಚರ್ಯವೂ ಒಮ್ಮೆಗೆ ಉಂಟಾಯಿತು. ಗಂಗರ ಈ ಅನಿರೀಕ್ಷಿತವಾದ ಪ್ರತಿಭಟನೆ ಅವರ ಆಕ್ರೋಶವನ್ನು ಕೆರಳಿಸಿತು. ಸೆಣಸಾಟದ ನಡುವೆ ತಾವೂ ನುಗ್ಗಿದರು.

ಮಿಂಚಿನಂತೆ ಅತ್ತ ಇತ್ತ ಜಿಗಿದು ವೈರಿಗಳನ್ನು ನೆಲಕ್ಕುರುಳಿಸುತ್ತಿದ್ದ ಕಿತ್ತಯ ಖಡ್ಗಧಾರಿಯಾಗಿ ತನ್ನನ್ನು ಕುರಿತು ಮುನ್ನುಗ್ಗುತ್ತಿದ್ದ ಕುದುರೆ ಸವಾರನನ್ನ ಕಂಡನು.

'ಮೊದಲು ಅವನ ಕುದುರೆ ಉರುಳಿಸಬೇಕು! ನಂತರ ಅವನನ್ನು ನಿಭಾಯಿಸುವುದು ಸುಲಭ!'

ಬಿರ್ರನೆ ಚಲಿಸಿದ ಕಿತ್ತಯನ ಬಾಣ ಮುನ್ನುಗ್ಗಿ ಬರುತ್ತಿದ್ದ ಕುದುರೆಯ ಎದೆಗೆ ನಾಟಿತು. ಕುದುರೆ ತತ್ತರಿಸಿ ಬೀಳುವ ಮುನ್ನ ಕಿತ್ತಯನ ಮೇಲೆರಗಿತು ಸವಾರನ ಕೈ ಖಡ್ಗ. ಆಘಾತಕ್ಕೊಳಗಾದ ಕಿತ್ತಯ ವೈರಿಯಮೇಲೆ ಕುಡುಗೋಲನ್ನು ಬೀಸಿ ಮಣ್ಣಿಗೆ ಸರಿದನು.

ಕನಸುಗಾರ ಕಿತ್ತಯ ಅಮರನಾದನು.

ಗಂಗವಾಡಿಯ ಸೈನ್ಯವು ರಟ್ಟವಾಡಿ ಸೈನ್ಯವನ್ನು ಸೋಲಿಸಿ ರಾಜ್ಯದ ಗಡಿಯವರೆಗೆ ಹಿಂಬಾಲಿಸಿ ಹೊರಗಟ್ಟಿ ಬಂದಿದ್ದರೂ ಕಿತ್ತಯನ ಪ್ರಾಣತ್ಯಾಗದಿಂದ ಸಹಿಸಲಾರದ ದುಃಖವನ್ನು ಊರಿಗೆ ಊರೇ ಅನುಭವಿಸಿತು. ಅವನ ಸಾಹಸವನ್ನೂ ತ್ಯಾಗವನ್ನೂ ಮೆಚ್ಚದವರೇ ಇಲ್ಲ.

ಗಂಗ ದೊರೆಗಳ ಆದೇಶದ ಮೇರೆಗೆ ಪೆರ್ನಾಗತ್ತರಸನು ಕಿತ್ತಯನಿಗಾಗಿ ಒಂದು ವೀರಗಲ್ಲನ್ನು ಕೆತ್ತಿಸಿದನು. ಕಿತ್ತಯನ ಕಥೆ ಹೇಳುವ ಅವನ ವೀರಗಲ್ಲು ಆತನಿಗೆ ಬಹು ಪ್ರಿಯವಾದ ಪೆರ್ಬ್ಬೊಳಲ ದಂಡೆಯಲ್ಲಿ ಪೆರ್ಗುನ್ದಿ ಕಿರುಗುನ್ದಿ ಸೋದರರಿಂದ ಸಕಲ ರಾಜ ಗೌರವಗಳೊಂದಿಗೆ ಪ್ರತಿಷ್ಠಾಪನೆಯಾಯಿತು. ■



## ಕನ್ನಡಕ್ಕಾಗಿ ಹಿಂದೆ

ಕನ್ನಡಕ್ಕಾಗಿ
ಕೈ ಎತ್ತುತ್ತಿದ್ದರು;
ಇಂದು ಕನ್ನಡಕ್ಕಾಗಿ
ಒಂದನ್ನು ಒತ್ತುತ್ತಿದ್ದಾರೆ!

– ಬಾಲು ಪಟಗಾರ

## ಆಸೆ

ಬರೆಯುತ್ತಿದ್ದೇನೆ
ಮಲಗಿರುವ ಬುದ್ಧನ
ತೊಡೆಯ ಮೇಲೆ
'ನಿದ್ರೆಯಲ್ಲಿ ಮಾನವ
ಆಸೆಪಡುವುದಿಲ್ಲ'

## ಏಕಾಂಗಿ

ಬರಗಾಲಕ್ಕೆ ಹೆದರಿ
ಊರೇ ಖಾಲಿ
ನನ್ನೊಡನೆ ಉಳಿದಿರುವವು
ಬಿಳಿ ಕಾಗದ, ಲೇಖನಿ
ಹಾಗೂ
ವಲಸೆ ಹೋಗದ ಕೋಗಿಲೆ



## ಸುಖ

ಭಿಕ್ಷೆ ಪಾತ್ರೆಯೊಡನೆ
ಅವಳು ಹೊರನಡೆಯುವಾಗ
ಗೋಣಿಚೀಲದ ಸುಖವನ್ನು
ಅನುಭವಿಸುತ್ತದೆ ನಾಯಿ!

– ಡಾ.ವಿ. ಪುಗಳೇಂದಿ